ರೋಜ್‌ಗಾರ್ ಯೋಜನಾ ಕಾರ್ಯಕ್ರಮಗಳ ಪಟ್ಟಿ ತಯಾರಿಸಿ ಕೋಲಾರ ಜಿಲ್ಲಾ ಪಂಚಾಯ್ತಿ ಕಛೇರಿಗೆ ಅನುಮೋದನೆಗೆ ಕಳುಹಿಸಿದ್ದನ್ನು ಜಿಲ್ಲಾ ಪಂಚಾಯ್ತಿಯವರು ತಿರಸ್ಕರಿಸಿ ವಾಪಸ್ಸು ಮಾಡಿರುವುದೇ ನಿಜವೇ?

ಆ) ತಾಲ್ಲೂಕು ಪಂಚಾಯ್ತಿಯವರು ದಿನಾಂಕ 1.12.2001ರ ಸಭೆಯಲ್ಲಿ ಯೋಜನೆಯ ಕಾರ್ಯಕ್ರಮಗಳನ್ನು ಸರ್ವಾನುಮತದಿಂದ ಅಂಗೀಕರಿಸಿದ ಮೇಲೆ ಅದನ್ನು ತಿರಸ್ಕರಿಸಲು ಯಾವ ಕಾಯಿದೆ ಮತ್ತು ಕಾನೂನು ಅಡಿಯಲ್ಲಿ ಜಿಲ್ಲಾ ಪಂಚಾಯ್ತಿಗೆ ಅಧಿಕಾರವಿದೆ?

## ಉತ್ತರ

ಅ) ಮಾರ್ಗಸೂಚಿಯ ರೀತ್ಯಾ ಕ್ರಿಯಾ ಯೋಜನೆ ತಯಾರಿಸಿಲ್ಲದ ಕಾರಣ ವಾಪಸ್ಸು ಕಳುಹಿಸಲಾಗಿದೆ.

ಆ) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯ ಮಾರ್ಗಸೂಚಿಯಂತೆ ಕ್ರಿಯಾ ಯೋಜನೆ ತಯಾರಿಸಿರುವುದಿಲ್ಲ ಮತ್ತು ಉದ್ಯೋಗ ಭರವಸೆ ಯೋಜನೆಯ ಮುಂದುವರೆದ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಸೇರಿಸಿರುವುದಿಲ್ಲ ಸರ್ಕಾರದ ಮಾರ್ಗಸೂಚಿಯನ್ನು ಪಾಲನೆ ಮಾಡಿಲ್ಲದ ಕಾರಣ ಹಿಂದಿರುಗಿಸಲಾಗಿದೆ.

ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚಿಲಕಲನೇರ್ಪು ಹೋಬಳಿಯ ಅಪ್ಪಸಾನಹಳ್ಳಿ ಗ್ರಾಮದ ಮೋರಿ ನಿರ್ಮಾಣ ಕಾರ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 210(707)

**ಸದಸ್ಯರ ಹೆಸರು: ಶ್ರೀ ಚೌಡರೆಡ್ಡಿ(ಚಿಂತಾಮಣಿ)**

**ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)**

## ಪ್ರಶ್ನೆ

1. ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚಿಲಕಲನೇರ್ಪು ಹೋಬಳಿ ಅಪ್ಪಸಾನಹಳ್ಳಿ ಗ್ರಾಮದ ರಸ್ತೆ ಮತ್ತು ಪೀಗಲಗಟ್ಟ ಗ್ರಾಮದ ಬಳಿ ಒಂದು ಕಿರು ಮೋರಿ ಕಾಮಗಾರಿಯು ಯಾವ ಯೋಜನೆಯಲ್ಲಿ ಕೋಲಾರ ಜಿಲ್ಲಾ ಪಂಚಾಯತ್‌ರವರು ಮಾಡಿಸಿರುತ್ತಾರೆ.

2. ಈ ಎರಡು ಕಾಮಗಾರಿಗಳ ನಿರ್ಮಾಣಕ್ಕೆ ಎಷ್ಟು ಮೊತ್ತ ವೆಚ್ಚವಾಗಿದೆ ಎಂಬುದಕ್ಕೆ ಪ್ರತ್ಯೇಕವಾಗಿ ವಿವರ ನೀಡುವುದು?

3. ಸದರಿ ಕಾಮಗಾರಿಗಳಿಗೆ ಬಿಲ್ಲುಗಳಿಗೆ ಹಣ ಪಾವತಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಪಾವತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

## ಉತ್ತರ

1. ಸದರಿ ಕಾಮಗಾರಿಯನ್ನು 2000-01ನೇ ಸಾಲಿನ 3054 ರಸ್ತೆ ಮತ್ತು ಸೇತುವೆ ಯೋಜನೇತರ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿರುತ್ತದೆ.

2. 1. ಅಪ್ಪಸಾನಹಳ್ಳಿ ರಸ್ತೆ ಕಾಮಗಾರಿಯ ಅಂದಾಜು ಮೊತ್ತ 30,000 ರೂ.ಗಳು ಕಾಮಗಾರಿ ಮುಗಿದಿದೆ.

2. ಸೀಗಲಗುಟ್ಟಿ ಗ್ರಾಮದ ಬಳಿ ಮೋರಿ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ 45,000 ರೂ.ಗಳು. ಕಾಮಗಾರಿ ಪೂರ್ಣಗೊಂಡಿದೆ.

3. ಬಿಲ್ಲುಗಳು ಪಾವತಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವರ್ಷದ ಅನುದಾನದಲ್ಲಿ ಪಾವತಿ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ: ವರ್ಗದ ಅಭ್ಯರ್ಥಿಗಳಿಗೆ ಬಡ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 211(567)

ಸದಸ್ಯರ ಹೆಸರು: ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ)

**ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)**

## ಪ್ರಶ್ನೆ

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ನೌಕರರಿಗೆ ಬಡ್ತಿಯಲ್ಲಿ ಅನ್ಯಾಯವಾಗಿರುವುದು ನಿಜವೆ?